**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಪಿಡಬ್ಲು : 4 ಸಿಡಬ್ಲು : 3

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಮಹೇಶ ಮಾರುತಿ ಗಾಡಿವಡ್ಡರ |
| ತಂದೆಯ ಹೆಸರು | : ಶ್ರೀ ಮಾರುತಿ ಗಾಡಿವಡ್ಡರ |
| ವಯಸ್ಸು | : 30 ವರ್ಷ |
| ಉದ್ಯೋಗ | : ಖಾಸಗಿ ರಿ ಕೆಲಸ |
| ವಾಸ್ತವ್ಯ | : ನಿಪ್ಪಾಣಿ |
| ದಿನಾಂಕ | : 02-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 02-04-2019 ರಂದು ಬಸವೇಶ್ವರ ಚೌಕ ಠಾಣಾ ಪೋಲಿಸರು ನನ್ನನ್ನು ಜತ್ರಾಟ-ಶೆರ್ಪವಾಡಿ ರಸ್ತೆಯಲ್ಲಿ ಕೆ.ಎಲ್.ಇ ಕಾಲೇಜ ಪಕ್ಕದಲ್ಲಿ ನನ್ನನ್ನು ಕರೆಸಿದ್ದರು. ನಾನು ಸ್ಥಳಕ್ಕೆ ಹೋದಾಗ ಅರವಿಂದ ಪೋಳ ಅವರ ಕೊಲೆ ಆಗಿದೆ ಎಂದು ಸ್ಥಳದಲ್ಲಿದ್ದ ಜನರು ಮಾತನಾಡಿಕೊಳ್ಳುತ್ತಿದ್ದರು. ಸ್ಥಳದಲ್ಲಿ ಪೋಲಿಸರೂ ಸಹ ಇದ್ದರು. ಪೋಲಿಸರು ಈಜುಗಾರರ ಮುಖಾಂತರ ಹುಡುಕಾಟ ನಡೆಸುತ್ತಿದ್ದರು. ಈಜುಗಾರರು ಎರಡು ಸಾರಿ ನೀರಿನ ಒಳಗೆ ಇಳಿದು ಮೇಲೆ ಬಂದರು, ಆದರೆ ಶವ ಸಿಕ್ಕಿರುವುದಿಲ್ಲ. ನಂತರ ಪೋಲಿಸರು ಮೂರು ವ್ಯಕ್ತಿಗಳನ್ನು ಕರೆಸಿದರು. ಆ ಮೂರು ವ್ಯಕ್ತಿಗಳು ಪೋಲಿಸರಿಗೆ ಸ್ಥಳ ತೋರಿಸಿ ನಾವು ಅರವಿಂದ ಪೋಳ ಅವರ ಮೃತ ದೇಹವನ್ನು ನಾವು ಇಲ್ಲಿ ಹಾಕಿದ್ದೇವೆ ಎಂದು ಸ್ಥಳ ತೋರಿಸಿದರು. ಸ್ಕೂಬಾ ಡೈವ [ಈಜುಗಾರರು] ಕ್ವಾರೆ [ಕಲ್ಲು ಗಣಿಗಾರಿಕೆ ] ಮಾಡಿ ಹಳ್ಳ ಮಾಡಿದ್ದ ಜಾಗದಲ್ಲಿ ನೀರು ತುಂಬಿದ್ದು ಆ ಸ್ಥಳದಿಂದ ಶವವನ್ನು ಮೇಲೆ ತೆಗೆದರು.

2. ಶವವನ್ನು ನೀರಿನಿಂದ ತೆಗೆದ ಕೂಡಲೇ ನೆಲದ ಮೇಲೆ ಇರಿಸಿ ಪೋಲಿಸರು ಪಂಚನಾಮೆ ಮಾಡಿದರು. ನಾನು ಸ್ಥಳದಲ್ಲಿಯೇ ಇದ್ದೇನು. ಸ್ಥಳದಲ್ಲಿದ್ದ ಪೋಲಿಸರು ನನ್ನನ್ನು ಸಾಕ್ಷಿಯಾಗಿ ಮಾಡಿ ನನ್ನ ಸಹಿ ಮಾಡಿಸಿಕೊಂಡರು. ಆ ಪಂಚನಾಮೆಯನ್ನು ಈಗಾಗಲೇ ನಿಪಿ–11 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–11 [ಬಿ] ಎಂದು ಗುರುತಿಸಲಾಯಿತು.

3. ನ್ಯಾಯಾಲಯದಲ್ಲಿ ಹಾಜರಿರುವ 1 ಮತ್ತು 2ನೇ ಆರೋಪಿತರನ್ನು ಸಾಕ್ಷಿ ಗುರುತಿಸಿದ್ದಾರೆ. ವಿಡಿಯೋ ಕಾನ್ಪರೆನ್ಸಿಂಗ ಮುಖಾಂತರ ವಿಚಾರಣೆಗೆ ಹಾಜರಾಗಿರುವ 3ನೇ ಆರೋಪಿಯನ್ನು ಸಾಕ್ಷಿ ಗುರುತಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ. ಪಂಚನಾಮೆ ಸಮಯದಲ್ಲಿ ಸ್ಥಳದಲ್ಲಿ ಪೋಲಿಸರು ಪೋಟೋ ತೆಗೆದಿದ್ದಾರೆ. ನಿಪಿ–7 ಪೋಟೋವನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ಹಾಗೂ ಚಾಸಾಃ 2 ಪ್ರಾಸಾಃ 3 ರವರ ಇರುವಿಕೆಯನ್ನು, ಪೋಲಿಸರು ಹಾಗೂ 3ನೇ ಆರೋಪಿಯ ಇರುವಿಕೆಯನ್ನು ಗುರುತಿಸಿದ್ದಾರೆ.

4. ನಿಪಿ–8 ಮತ್ತು ನಿಪಿ–9 ರ ಪೋಟೋಗಳಲ್ಲಿ ಸಾಕ್ಷಿಯು 1 ಮತ್ತು 2 ನೇ ಆರೋಪಿತರ ಇರುವಿಕೆಯನ್ನು, ತಮ್ಮ ಹಾಗೂ ಪೋಲಿಸರ ಇರುವಿಕೆಯನ್ನು ಗುರುತಿಸಿದ್ದಾರೆ. ಶವದ ಪೋಟೋವನ್ನು ನೋಡಿದರೆ ನಾನು ಗುರುತಿಸುತ್ತೇನೆ. ನಿಪಿ–5 ಪೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತಮ್ಮ ಇರುವಿಕೆಯನ್ನು, ಅರವಿಂದ ಪೋಳ ಅವರ ಮೃತ ದೇಹವನ್ನು ಹಾಗೂ ಅವರ ತಮ್ಮ ಅಜಿತ ಪೋಳ ಅವರ ಇರುವಿಕೆಯನ್ನು ಗುರುತಿಸಿದ್ದಾರೆ.

5. ಅಜಿತ ಪೋಳ ಅವರು ಸ್ಥಳಕ್ಕೆ ಯಾವಾಗ ಬಂದರು ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಪೋಲಿಸರು ಅವರನ್ನು ಕರೆಸಿದ್ದರು. ಶವ ಸಿಕ್ಕಿದ ಸ್ಥಳವನ್ನು ಹೊರತುಪಡಿಸಿ ಪೋಲಿಸರು ಬೇರೆ ಸ್ಥಳಕ್ಕೆ ನನ್ನನ್ನು ಕರೆಸಿರುವುದಿಲ್ಲ.

6. ಶವ ಸಿಕ್ಕ ಮರುದಿನ ಪೋಲಿಸರು ನನ್ನನ್ನು ಪೋಲಿಸ ಠಾಣೆ ಕರೆಸಿದ್ದರು, ಅಲ್ಲಿ ನನ್ನ 4 ರಿಂದ 5 ಸಹಿಗಳನ್ನು ಮಾಡಿಸಿಕೊಂಡರು. ಈಗ ನಾನು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-10 ಪಂಚನಾಮೆ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಅದನ್ನು ನಿಪಿ-10 [ಬಿ ] ಎಂದು ಗುರುತಿಸಲಾಯಿತು. ನಿಪಿ-6 ಶವ ಪಂಚನಾಮೆ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಅದನ್ನು ನಿಪಿ-6 [ಬಿ] ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು, ಚಾಸಾಃ 2 ಪ್ರಾಸಾಃ3 ರವವ ಇರುವಿಕೆಯನ್ನು, 1ನೇ ಆರೋಪಿ ಹಾಗೂ ಪೋಲಿಸರ ಇರುವಿಕೆಯನ್ನು ಗುರುತಿಸಿದ್ದಾರೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 01-04-2019 ರಂದು ಸಂಜೆ 6:00 ಗಂಟೆಗೆ ಬಸವೇಶ್ವರ ಚೌಕ ಪೋಲಿಸ ಠಾಣೆಗೆ ಪೋಲಿಸರು ನನ್ನನ್ನು ಕರೆಸಿದ್ದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಠಾಣೆಯಲ್ಲಿ 1ನೇ ಆರೋಪಿ ಇದ್ದು, ಆತನು ತನ್ನ ಇಬ್ಬರು ಸ್ನೇಹಿತರು ಸೇರಿ ಅರವಿಂದ ಪೋಳ ಅವರನ್ನು ಕೊಲೆ ಮಾಡಿ ಶವವನ್ನು ನೀರಿನ ಕಣಿವೆಯಲ್ಲಿ ಹಾಕಿದ್ದೇವೆ ಎಂದು, ನನ್ನನ್ನು ಕರೆದುಕೊಂಡು ಹೋದರೆ ನಾನು ಸ್ಥಳ ತೋರಿಸುತ್ತೇನೆ ಎಂದು ಹೇಳಿದ್ದು, ಆ ಪ್ರಕಾರ ನಾನು, 1ನೇ ಆರೋಪಿ, ಚಾಸಾಃ 2 ಪ್ರಾಸಾಃ3 ಪ್ರಮೋದ, ಪೋಲಿಸರು ಜೀಪಿನಲ್ಲಿ ಹೊರಟಿದ್ದು, 1ನೇ ಆರೋಪಿ ಹೇಳಿದಂತೆ ಪೋಲಿಸರು ಜೀಪನ್ನು ಚಲಾಯಿಸಿಕೊಂಡು ಹೋಗಿ 1ನೇ

ಆರೋಪಿ ತೋರಿಸಿದ ಸ್ಥಳದಲ್ಲಿ ಜೀಪನ್ನು ನಿಲ್ಲಿಸಿದರು, 1ನೇ ಆರೋಪಿ ನಾಗನೂರು ಹದ್ದಿಯಲ್ಲಿರುವ ಕಣಿವೆ ಬಳಿ ಪೋಲಿಸರನ್ನು ಮತ್ತು ನಮ್ಮನ್ನು ಕರೆದುಕೊಂಡು ಹೋಗಿ ಸ್ಥಳ ತೋರಿಸಿ ಅಲ್ಲಿ ಮೃತ ದೇಹವನ್ನು ಹಾಕಿದ್ದೇವೆ ಎಂದು ಹೇಳಿದ ಪ್ರಕಾರ ಪೋಲಿಸರು ಆ ಸ್ಥಳದಲ್ಲಿ ಸಂಜೆ 7:00 ಗಂಟೆಯವರೆಗೆ ನಿಪಿ–10 ರಂತೆ ಪಂಚನಾಮೆ ಮಾಡಿದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ–10 [ಬಿ] ಪ್ರಕಾರ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ. ಆ ದಿನ ಕತ್ತಲಾಗಿದ್ದರಿಂದ ಪೋಲಿಸರು ನನ್ನನ್ನು ವಾಪಸ್ ಕಳುಹಿಸಿದ್ದು, ಮರುದಿನ ಮಧ್ಯಾಹ್ನ 12:00ಗಂಟೆ ಸಮಯಕ್ಕೆ ಪುನಃ ನನ್ನನ್ನು ಸ್ಥಳಕ್ಕೆ ಕರೆಸಿದ್ದರು ಎನ್ನುವುದು ಸರಿಯಲ್ಲ.

2. ನಾನು ಅಲ್ಲಿಗೆ ಹೋಗಿದ್ದಾಗ ಪೋಲಿಸರು ಮೂರು ಜನ ಆರೋಪಿತರನ್ನು ನನಗೆ ತೋರಿಸಿದರು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಮೂರು ಜನ ಆರೋಪಿತರನ್ನು ಸ್ಥಳದಲ್ಲಿ ನಾನು ನೋಡಿದ್ದೇನೆ ಎಂದು ಹೇಳಿದ್ದಾರೆ.

3. ಆರೋಪಿತರು ತೋರಿಸಿದ ಸ್ಥಳದಲ್ಲಿ ಶವ ಸಿಕ್ಕಿದ್ದು, ಶವವನ್ನು ನೀರಿನಿಂದ ಮೇಲೆ ತೆಗೆದ ನಂತರ ಮೃತರ ತಮ್ಮನಿಗೆ ಪೋಲಿಸರು ಹೇಳಿ ಕರೆಸಿಕೊಂಡರು ಎನ್ನುವುದು ಸರಿ. ಮೃತರ ತಮ್ಮ, ತಮ್ಮ ಅಣ್ಣನ ಶವವನ್ನು ಗುರುತಿಸಿದ್ದಾರೆ ಎನ್ನುವುದು ಸರಿ.

4. ಸ್ಥಳದಲ್ಲಿ ಮೃತರ ಮೈಮೇಲೆ ಯಾವ ಯಾವ ಭಾಗದಲ್ಲಿ ಏನೇನು ಆಗಿದೆ ಎಂದು ನೋಡಿ ಪಂಚನಾಮೆ ಮಾಡಿ ಬರೆದುಕೊಂಡು, ನಿಪಿ–6 ರಂತೆ ಪಂಚನಾಮೆ ಮಾಡಿದ್ದು, ಸ್ಥಳದಲ್ಲಿ ನಿಪಿ–6 [ಬಿ] ಪ್ರಕಾರ ನಾನು ಸಹಿ ಮಾಡಿದ್ದೇನೆ ಎನ್ನುವುದು ಸರಿ.

5. ದಿನಾಂಕಃ 01–04–2019 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದು, ನಂತರ ಸ್ಥಳಕ್ಕೆ ಕರೆದುಕೊಂಡು ಹೋಗಿ, 1ನೇ ಆರೋಪಿ ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತೇದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಬಿ .ಜೆ .ಜಿ . ವಕೀಲರಿಂದ 3 ನೇ ಆರೋಪಿತನ ಪರವಾಗಿ**

ನಾನು ದ್ವಿತಿಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮೃತ ಅರವಿಂದ ಪೋಳ ಅವರ ಕಿರಾಣಿ ಅಂಗಡಿಯನ್ನು ನೋಡಿರುವುದಿಲ್ಲ. ನಾನು ಪೋಳ ಅವರ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನು ಎನ್ನುವುದು ಸರಿಯಲ್ಲ. ಅಜಿತ ಪೋಳ ಅವರು ನನಗೆ ಗೊತ್ತಿರುತ್ತಾರೆ. ಈ ದಿನ ಅವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದು ಹೇಳಿದ್ದಾರೆ. ನಾನು ಕಾರಿನ ಚಾಲಕನಾಗಿ ಕೆಲಸ ಮಾಡುತ್ತೇನೆ. ನಾನು ಪೋಲಿಸರ ಮುಂದೆ ವ್ಯಾಪಾರ ಮಾಡುತ್ತೇನೆ ಎಂದು ಹೇಳಿರುವುದಿಲ್ಲ.

2. ನಿಪಿ–5, ನಿಪಿ–7, ನಿಪಿ–8, ನಿಪಿ–9 ಪೋಟೋಗಳನ್ನು ನಾನು ಇಂದು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಈ ಹಿಂದೆ ಪೋಲಿಸರು ನನಗೆ ತೋರಿಸಿರುವುದಿಲ್ಲ ಎನ್ನುವುದು ಸರಿ. ಪಂಚನಾಮೆ ಆದ ದಿನ ನಾನು ನನ್ನ ಸ್ಕೂಟಿಯಲ್ಲಿ ಕಾಂಬಳೆ ಅವರನ್ನು ನೋಡಲು ಜತ್ರಾಟಗೆ ಹೋಗುತ್ತಿದ್ದನು. ನಮ್ಮೂರಿನಿಂದ ಜತ್ರಾಟ ಗ್ರಾಮ ಸುಮಾರು 12 ಕಿಲೋಮೀಟರ ದೂರದಲ್ಲಿದೆ.

3. ಮೃತ ಅರವಿಂದ ಪೋಳ ಮತ್ತು ಅವರ ತಮ್ಮ ಅಜಿತ ಪೋಳ ಅವರು ಮೊದಲಿನಿಂದಲೂ ನನಗೆ ಪರಿಚಯ ಇರುವುದಿಲ್ಲ. ಪೋಲಿಸರು ನನಗೆ ಪಂಚನಾಮೆಗೆ ಪಂಚಸಾಕ್ಷಿಯಾಗಿ ಬರುವಂತೆ ನೋಟಿಸ ನೀಡಿರುವುದಿಲ್ಲ.

4. ಆರೋಪಿತರಿಗೆ ಕೈ ಮಾಡಿ ತೋರಿಸುವಂತೆ ಪೋಲಿಸರು ಹೇಳಿ ನಿಲ್ಲಿಸಿ ಪೋಟೋ ತೆಗೆದಿದ್ದಾರೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಸಹ ಮೃತ ಅರವಿಂದ ಪೋಳ ಅವರ ತಮ್ಮ ಅಜಿತ ಪೋಳ ಅವರ ಬಳಿ ನಾನು ಕೆಲಸ ಮಾಡುತ್ತಿದ್ದ ಕಾರಣ ಅವರು ಹೇಳಿಕೊಟ್ಟ ಪ್ರಕಾರ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ–5,

ನಿಪಿ–7, ನಿಪಿ–8, ನಿಪಿ–9 ಪೋಟೋಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಎಸ್.ಆರ್ ಮತ್ತು ಶ್ರೀ.ಎಲ್.ಜಿ.ಎನ್ ವಕೀಲರಿಂದ**

3 ನೇ ಆರೋಪಿತನ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.